# ೫. ಪ್ರಾಸ

ಪ್ರಾಸ ಎಂಬ ಮಾತು ಕಾವ್ಯ ಪ್ರಪಂಚದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. 'ಪ್ರಾಸ' ಎನ್ನುವುದು ಸಂಸ್ಕೃತ ಶಬ್ದ. ಕನ್ನಡದಲ್ಲಿ ಪ್ರಾಸದ ವಿಚಾರವನ್ನು ಮೊದಲು ಪ್ರಸ್ತಾಪಿಸಿದವನು 'ಕವಿರಾಜಮಾರ್ಗಕಾರ'.

ಪದ್ಯದ ಪ್ರತಿಯೊಂದು ಸಾಲಿನಲ್ಲಿ ನಿಯತವಾದ ಸ್ಥಳದಲ್ಲಿ ಒಂದೇ ರೀತಿಯ ಅಕ್ಷರಗಳು ಪುನರಾವರ್ತನೆಯಾಗುತ್ತಿದ್ದರೆ, ಆ ಅಕ್ಷರಗಳಿಗೆ ಪ್ರಾಸಾಕ್ಷರ ಎಂದು ಕರೆಯುವರು. ಇಂಗ್ಲಿಷಿನಲ್ಲಿ Rhyme ಎಂಬ ಪದವನ್ನು ಪ್ರಾಸಕ್ಕೆ ಸಂವಾದಿಯಾಗಿ ಬಳಸಲಾಗುತ್ತದೆ. ಒಂದೇ ಬಗೆಯ ಆವರ್ತನೆಗೆ Rhyme ಎನ್ನಲಾಗಿದೆ.

ಪ್ರಾಸದಲ್ಲಿ ಎರಡು ವಿಧ. ಒಂದು ಆದಿಪ್ರಾಸ, ಇನ್ನೊಂದು ಅಂತ್ಯಪ್ರಾಸ. ಪದ್ಯದ ಪಾದಗಳ ಎರಡನೇ ಅಕ್ಷರ ಒಂದೇ ಆಗಿರುವುದು ಆದಿಪ್ರಾಸ. ಈ ಬಗ್ಗೆ ಮೊದಲು ಪ್ರಸ್ತಾಪ ದೊರೆಯುವುದು 'ಕವಿರಾಜಮಾರ್ಗ'ದಲ್ಲಿ. ಅದನ್ನು ಈ ರೀತಿ ಕಾಣಬಹುದು.

ಪಾದದೊಳೆರಡನೆಯ ಅಕ್ಕರ
ಮಾದರಿದಿಂದಾಗುವುದರ ನರಿದನಿತು
ಪಾದದೊಳಿಡುವುದಕ್ಕಂ
ಭೇದೋಕ್ತಿಕ್ರಮ ವಿಚಾರಿತೋರು ಪ್ರಾಸಂ

ಪ್ರತಿಸಾಲಿನ ಕೊನೆಯಕ್ಷರ ಒಂದೇ ಆಗಿರುವುದು 'ಅಂತ್ಯಪ್ರಾಸ' 'ಪಾದ' ದ್ವಿತೀಯಾವರ್ಣ; ಪಾದಂ ಪಾದಂ ಯವತಿ ಸೋನುಪ್ರಾಸಂ; ನುತ ಶಬ್ದಾಲಂಕಾರ ದೊಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ ಎಂದು ಕವಿರಾಜಮಾರ್ಗಕಾರ ಪ್ರಾಸವನ್ನು ಶಬ್ದಾಲಂಕಾರ ಎಂದು ಕರೆದಿದ್ದಾನೆ.

"ದ್ವಿತೀಯಾಕ್ಷರಂ ಪಾದೇ ಪ್ರಾಣಾಕ್ಷರ ಮಿತಿ ಸ್ಯತಮ್" ಎಂದು ಸೋಮೇಶ್ವರನು ಮತ್ತು "ವರ್ಣ ಸಾಮ್ಯಾನುಪ್ರಾಸಂ" ಎಂದು ಮಮ್ಮಟನು ಕರೆದಿದ್ದಾನೆ.

ಕವಿರಾಜಮಾರ್ಗಕಾರನು ವಿನುತ, ಶಾಂತ, ವರ್ಗ, ಸಮೀಪ, ಅನುಪ್ರಾಸ/ ಮಧ್ಯಪ್ರಾಸ, ಅಂತ್ಯಪ್ರಾಸ ಎಂಬ ಆರು ವಿಧದ ಪ್ರಾಸಗಳನ್ನು ಹೇಳಿದ್ದಾನೆ.

Scanned with CamScanner
Scanned with CamScanner

ನಾಗವರ್ಮನ ಪ್ರಕಾರ ಪ್ರಾಸದಲ್ಲಿ ಆರು ವಿಧಗಳಿವೆ. ಅವುಗಳ ಕುರಿತ [illegible] ಲಕ್ಷಣ ಪದ್ಯ ಹೀಗಿದೆ.

ನಿಜದಿಂ ಬಂದೊಡೆ ಸಿಂಹಂ
ಗಜದೀರ್ಘ, ಬಿಂದು ವೃಷಭ, ವ್ಯಂಜನ ಶರಭಂ,
ಅಜನು ವಿಸರ್ಗಂ, ಹಯನಂ
ಭುಜಮುಖಿದಡ್ಡಕ್ಕರಂಗಳಿವು, ಷಟ್ ಪ್ರಾಸಂ

೧. ಸಿಂಹಪ್ರಾಸ:

ಪ್ರಾಸಾಕ್ಷರವು ಹ್ರಸ್ವ ಅಥವಾ ಪ್ರಾಸಾಕ್ಷರದ ಹಿಂದಿನ ಅಕ್ಷರ ಹ್ರಸ್ವವಾಗಿದ್ದರೆ ಅದು ಸಿಂಹಪ್ರಾಸ.

ಉದಾ:

ಅವರವವ ದರುಶನಕೆ
ಅವರವರ ವೇಶದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ!

೨. ಗಜಪ್ರಾಸ:

ಪ್ರಾಸಾಕ್ಷರದ ಹಿಂದಿನ ಅಕ್ಷರ ದೀರ್ಘವಾಗಿದ್ದರೆ, ಅದು ಗಜಪ್ರಾಸ.

ಉದಾ:

ಈಶನ ಕರುಣೆಯ
ನಾಶಿಸು ವಿನಯದಿ
ದಾಸನ ಹಾಗೆಯೆ ನೀ ಮನವೇ

೩. ವೃಷಭಪ್ರಾಸ:

ಪ್ರಾಸಾಕ್ಷರದ ಹಿಂದಿನ ಅಕ್ಷರ ಬಿಂದುವಾಗಿದ್ದರೆ ಅದು ವೃಷಭಪ್ರಾಸ.

ಉದಾ:

ಪಿಂತಮರ್ದಿರೆ, ರಳ ಕುಳರೇ
ಘಾಂತಂ ಪ್ರಸ್ತಾದಿಲಿಂಗಮಂ, ತಾಗಳ್ ಮೆ

೪. ಅಜಪ್ರಾಸ:

ಪ್ರಾಸಾಕ್ಷರದ ಹಿಂದಿನ ಅಕ್ಷರ ವಿಸರ್ಗವಾಗಿದ್ದರೆ ಅದು ಅಜಪ್ರಾಸ.

ಉದಾ:

ಆಃ ಪೊರೆವನಿದನ್ ಪರಮಯೆ
ಶಃ ಪಾತ್ರನೆ ನಲ್ಲೆ

Scanned with CamScanner
Scanned with CamScanner

೫. ಹಯಪ್ರಾಸ:

ಪ್ರಾಸಾಕ್ಷರ ಸಜಾತಿಯ ಸಂಯುಕ್ತಾಕ್ಷರವಾಗಿದ್ದರೆ ಅದು ಹಯಪ್ರಾಸ.

ಉದಾ:

ಅನ್ನವನು ನೀಡುವುದು ನನ್ನಿಯನು ನುಡಿವುದು
ತನ್ನಂತೆ ಪರರ ಬಗೆವಡೆ....

೬. ಶರಭಪ್ರಾಸ:

ಪ್ರಾಸಾಕ್ಷರವು ವಿಜಾತಿಯ ಸಂಯುಕ್ತಾಕ್ಷರವಾಗಿದ್ದರೆ, ಅದು ಶರಭಪ್ರಾಸ.

ಉದಾ:

ಇಂದ್ರಂ ಬೋಲ್ ವಿಭವಯುತಂ
ಚಂದ್ರಂ ಬೋಲ್ ಕಾಂತಿವಂತನ್

ಈ ಆರು ಪ್ರಾಸಗಳ ಜೊತೆಗೆ ಕವಿ ಜಿಹ್ವಾಬಂಧನದಲ್ಲಿ ಅಲ್ಪಪ್ರಾಸ, ಮಹಾಪ್ರಾಸ, ಮಿತಾಕ್ಷರಪ್ರಾಸ ಎಂಬ ಮೂರು ಬಗೆಗಳನ್ನು ಗುರುತಿಸಲಾಗಿದೆ.

ಗುಣಚಂದ್ರನ ಛಂದಸ್ಸಾರದಲ್ಲಿ ಸುಕರಪ್ರಾಸ, ಅನುಪ್ರಾಸ, ದುಷ್ಕರಪ್ರಾಸ, ಅಂತ್ಯಪ್ರಾಸ, ದ್ವಿಪ್ರಾಸ ಎಂಬ ಭೇದಗಳನ್ನು ಹೇಳಲಾಗಿದೆ.

ಹೀಗೆ ಪ್ರಾಸದಲ್ಲಿ ಹಲವು ಬಗೆಗಳಿದ್ದರೂ ವಿಶೇಷವಾಗಿ ಆದಿಪ್ರಾಸ, ಅನುಪ್ರಾಸ ಮತ್ತು ಅಂತ್ಯಪ್ರಾಸಗಳ ಬಳಕೆ ಹೆಚ್ಚು ಎಂಬುದನ್ನು ಗಮನಿಸಬಹುದು.

ಈ ಆರು ಪ್ರಾಸಗಳನ್ನು "ಸಿಂಹ ಮಾಟವಾಗಿ, ವೃಷಭ ಸೊನ್ನೆಯನ್ನು ಹೋಲುವ ಹಿಣ್ಣೆಲುಳ್ಳದಾಗಿ, ತುರಗ ಲಯಬದ್ಧ ಗತಿಯುಳ್ಳದ್ದಾಗಿ, ಶರಭ ವಿಲಕ್ಷಣ ಉಳ್ಳದ್ದಾಗಿ, ಅಜ (ಆಡು) ತನ್ನ ಕೊರಳಡಿ ಎರಡು ಮೊಲೆಗಳುಳ್ಳದ್ದಾಗಿದೆ. ತತ್ಸದೃಶ ಅಕ್ಷರಗಳ ಹೆಸರಾದವು" ಎಂದು ಡಾ॥ ಎಲ್. ಬಸವರಾಜು ಅವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಾಸವು ಹಳಗನ್ನಡ ಕಾವ್ಯಗಳಲ್ಲಿ ನಿಯತವಾಗಿ ಬಳಸಲಾಗುತ್ತಿದ್ದು, ಆದಿಪ್ರಾಸವನ್ನು ಹೊಸಗನ್ನಡಕ್ಕೆ ಬಂದಾಗ ತ್ಯಜಿಸಲಾಯಿತು. ಈ ಪ್ರಯತ್ನವನ್ನು ಮೊದಲು ಮಾಡಿದವರು ಗೋವಿಂದಪೈಗಳು. ಗೋವಿಂದ ಪೈಗಳು ೧೯೧೧ ಜುಲೈ ೬ರಂದು ಬಹುಜನರ ಇಚ್ಛೆಗೆ ವಿರುದ್ಧವಾಗಿ ಆದಿಪ್ರಾಸವನ್ನು ಕೈಬಿಟ್ಟು ಕಾವ್ಯ ರಚಿಸಿದರು. ಅವರು ರಚಿಸಿದ "ಹೊಲೆಯನು ಯಾರು? ಎಂಬ ಕವಿತೆಯು ಕನ್ನಡದಲ್ಲಿ ಆದಿಪ್ರಾಸವನ್ನು ಬಿಟ್ಟು ಬರೆದ ಮೊದಲ ಐತಿಹಾಸಿಕ ಕವಿತೆಯಾಗಿದೆ. ಅಂದು ಅವರು ಇಟ್ಟ ಪುಟ್ಟ ಹೆಜ್ಜೆಯು ಪ್ರಯೋಗದ ಬಾಗಿಲನ್ನೇ ತೆರೆಯಿತು. ಅವರ ಹೆಜ್ಜೆ ಇಂದು ರಾಜಮಾರ್ಗವಾಗಿದೆ.

ಹೀಗೆ ಪ್ರಾಸದ ಬಳಕೆಯ ಬಗೆಗೆ ಹಲವು ಭಿನ್ನಾಭಿಪ್ರಾಯಗಳಿದ್ದರೂ ಕಂಡ

Scanned with CamScanner

Scanned with CamScanner

ಪ್ರಾಸದ ರಚನೆಯು ಸೌಂದರ್ಯಕ್ಕೆ ಅಗತ್ಯವೆಂಬುದನ್ನು ಅಲ್ಲಗಳೆಯುವಂತಿಲ್ಲ. [illegible] ಪ್ರಾಸದ ಪ್ರಯೋಜನ ಕುರಿತು ಹಲವು ವಿದ್ವಾಂಸರು ಅಭಿಪ್ರಾಯ ನೀಡಿದ್ದಾರೆ.

"ಏಕ ಸೂತ್ರತೆಯನ್ನು, ಪ್ರತ್ಯೇಕತೆಯನ್ನು ನಿಶ್ಚಿತವಾಗಿ ಅವಗಾಹನೆಗೆ ತರುವುದು ಪ್ರಾಸದ ಕೆಲಸ. ಪ್ರತಿಧ್ವನಿಯಂತೆ ಪರಿಣಾಮವನ್ನು ಅದು ತನ್ನದೇ ಆದ ಆನಂದವನ್ನು ಬೀರುತ್ತದೆ" ಎಂದು ಡಿ.ಎಸ್. ಕರ್ಕಿ ಹೇಳಿದ್ದಾರೆ.

ಪ್ರಾಸದ ಅವಶ್ಯಕತೆ ಕುರಿತು ಈಶ್ವರ ಕವಿ ಹೀಗೆ ಹೇಳಿದ್ದಾನೆ.

**"ಉಸುರಳಿದ ತನುವವೊಲ್ ಭಾ**
**ವಿಸಲುಂ ಪ್ರಾಸವಿಲ್ಲದಿರ್ಪ ಪದಪದ್ಯಂಗಳ್"**

ಅಂದರೆ, ಪ್ರಾಸವಿಲ್ಲದ ಪದ್ಯ ಉಸಿರಿಲ್ಲದ ಶರೀರದಂತೆ ನಿಷ್ಪ್ರಯೋಜಕ ಎಂಬುದು ಅವನ ಅಭಿಮತ.

ಸರ್ವಜ್ಞನು ಪ್ರಾಸದ ಅವಶ್ಯಕತೆ ಕುರಿತು ಈ ರೀತಿಯಾಗಿ ಹೇಳಿದ್ದಾನೆ.

**ಪ್ರಾಸವಿಲ್ಲದ ಪದವ ತಾಸು ಹಾಡಿದರೇನು**
**ಸಾಸುವೆ ಎಣ್ಣೆ ಹದಮಾಡಿ ಕಣ್ಣಿಂಗೆ**
**ಸೂಸಿಕೊಂಡಂತೆ ಸರ್ವಜ್ಞ**

ಒಟ್ಟಿನಲ್ಲಿ ಪ್ರಾಸವು ಪದ್ಯರಚನೆಗೆ ನಿಯತವಾದ ಒಂದು ಬಿಗಿಯನ್ನು ಒದಗಿಸುತ್ತದೆ. "ಪದಗತಿಯಲ್ಲಿ ಒಂದು ಸಮತೂಕವಿದ್ದ ನಾದ ಸಾಮರಸ್ಯವು ಇದರಿಂದ ಉಂಟಾಗುತ್ತದೆ" ಎಂದು ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಅಭಿಪ್ರಾಯ ಪಟ್ಟಿದ್ದಾರೆ.

ಪ್ರಾಸವು ಭಾವನೆ ಮತ್ತು ಆಲೋಚನೆಗಳ ಸಂಗೀತ ಗುಣದ ಅಂಶವಾಗಿರುತ್ತದೆ. ಆದ್ದರಿಂದ ಇದನ್ನು ಆಲೋಚನೆಗೆ ಸಾಧ್ಯವಿರುವ ಸಂಗೀತದ ಸಾಮರ್ಥ್ಯ, ಭಾವನೆಯ ಸಂಗೀತ ಎಂದು ಗುರುತಿಸಬಹುದು.

ಪ್ರಾಸವು ಪದ್ಯಕ್ಕೆ ಸೊಗಸನ್ನು, ಬೆರಗನ್ನು ತರುತ್ತದೆ. ಪ್ರಾಸದಿಂದ ಪದ್ಯಗಳನ್ನು ನೆನಪಿಟ್ಟುಕೊಳ್ಳಲು ಅನುಕೂಲವಾಗುತ್ತದೆ.

ಆದರೆ ಪ್ರಾಸವು ಪದ್ಯದ ರಸ, ಭಾವಗಳನ್ನು ಪುಷ್ಟೀಕರಿಸುವಂತೆ ಬಳಕೆಯಾಗಬೇಕು. ಅದು ಸಹಜವಾಗಿ ಪದ್ಯದಲ್ಲಿ ಸೇರ್ಪಡೆಯಾದಂತೆ ಇರಬೇಕು. "ಪ್ರಾಸದ ಮೋಹ ಅತಿಯಾದರೆ ಅದು ಅಲಂಕಾರದ ಬಡಿಗೆಯಾಗಿ, ಭಾವ ಸೌಂದರ್ಯ ಸ್ಫುಟವಾಗುವ ಬದಲು ಶಬ್ದಹಂಬಲದ ಮೇಲುಗೈಯಾಗುತ್ತದೆ" ಎಂದು ಡಾ|| ಟಿ.ವಿ. ವೆಂಕಟಾಚಲಶಾಸ್ತ್ರಿಯವರು ಅಭಿಪ್ರಾಯಪಟ್ಟಿದ್ದಾರೆ.

Scanned with CamScanner

Scanned with CamScanner